# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ ಆಇ 19 ಬಿಪಿಇ 2012, ದಿನಾಂಕ: 20-12-2012.
2. ಪತ್ರ ಸಂಖ್ಯೆ: ಖ.ನಿ. ಪ್ರಕ್ರಿಯ/43/2013-14, ದಿನಾಂಕ: 21-11-2013.

* * * * *

**ಪ್ರಸ್ತಾವನೆ :**

2012-13ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿನಾಂಕ: 31-3-2013 ರಂದೇ 2012-13ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿತ್ತು. ಸದರಿ ವೇಳಾಪಟ್ಟಿಯಂತೆ ಇಲಾಖಾ ಅಧಿಕಾರಿಗಳು ಹಾಗೂ ಖಜಾನಾಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿದ್ದು ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ.

2013-14 ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಸಹ, ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿನಾಂಕ: 29-3-2014ರಂದೇ 2013-14ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಸೂಕ್ತ ವೇಳಾಪಟ್ಟಿಯನ್ನು ನೀಡಿ ಸಾಕಷ್ಟು ಮುಂಚಿತವಾಗಿ ಆದೇಶವನ್ನು ಹೊರಡಿಸುವುದು ಅವಶ್ಯವಿದೆಯೆಂದು ಖಜಾನೆ ನಿರ್ದೇಶಕರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರವನ್ನು ಕೋರಿದ್ದಾರೆ. ಆದ್ದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಆಇ 16 ಬಿಪಿಇ 2013, ಬೆಂಗಳೂರು, ದಿನಾಂಕ : 13-12-2013.**

ಎ) ಆಡಳಿತ ಇಲಾಖೆಗಳ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ನಿಗದಿಗೊಳಿಸಿರುವ ಕಾಲಮಿತಿ.

| ಕ್ರ ಸಂ: | ಬಿಲ್ಲುಗಳ ಸ್ವರೂಪ/ವಿವರಗಳು | ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕ |
|---|---|---|
| 1 | 2 | 3 |
| 1 | ದಿನಾಂಕ:31-01-2014ರ ಹಾಗೂ ಅದಕ್ಕೂ ಮುಂಚಿತ ಅವಧಿಯಲ್ಲಿ ಭರಿಸಿದ ಎಲ್ಲಾ ಪ್ರಯಾಣ ವೆಚ್ಚಗಳ/ಸಾದಿಲ್ವಾರು ವೆಚ್ಚಗಳ ಬಿಲ್ಲುಗಳು | 28-02-2014 |
| 2 | ದಿನಾಂಕ: 31-01-2014ರ ನಂತರ ಭರಿಸಿದ ವೆಚ್ಚಗಳಿಗೆ ಸಂಬಂಧಿಸಿದ ಎಲ್ಲಾ ಸಾದಿಲ್ವಾರು/ಪ್ರಯಾಣ ಭತ್ಯೆ ಬಿಲ್ಲುಗಳು | 15-03-2014 |
| 3 | EAP. ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅನುದಾನ ಆದೇಶಗಳು. | ಎಲ್ಲಾ ಅನುದಾನ ಬಿಡುಗಡೆ ಆದೇಶಗಳನ್ನು ದಿನಾಂಕ:15.02.2014 ರೊಳಗೆ ಸಂಬಂಧಿಸಿದ ಇಲಾಖಾಧಿಕಾರಿಗಳು ಹೊರಡಿಸತಕ್ಕದ್ದು. |
| | ಇದರ ಸಂಬಂಧ ಅಪ್‌ಲೋಡಿಂಗ್ ಕಾರ್ಯ ಮತ್ತು ಬಿಲ್ಲುಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ. | 15-03-2014 |

| | | |
|---|---|---|
| 4 | ಯಾವುದೇ ಅವಧಿಯ ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳು | 15-03-2014 |
| 5 | ಮಾರ್ಚ್ 2014ರ ಒಳಗೆ ಪಾವತಿಸಲ್ಪಡುವ ಅನುದಾನಿತ ವೇತನ ಬಿಲ್ಲುಗಳನ್ನು ಹಾಗೂ ಇತರೇ ಅನುದಾನಿತ ಬಿಲ್ಲುಗಳು | 25-03-2014 |
| 6 | ವೇತನ ಬಾಕಿ ಬಿಲ್ಲುಗಳು ಮತ್ತು ಹಬ್ಬದ ಮುಂಗಡ ಮುಂತಾದ ಬಿಲ್ಲುಗಳು | 25-03-2014 |
| 7 | ಏಪ್ರಿಲ್‌ನಲ್ಲಿ ಪಾವತಿಸಲಾಗುವ ಎಲ್ಲಾ ವೇತನ/ಅನುದಾನಿತ ವೇತನ ಬಿಲ್ಲುಗಳು | ದಿ: 15-03-2014 ರಿಂದ ದಿ:21-03-2014 ರೊಳಗೆ ಅಥವಾ 02-04-2014ರ ನಂತರ. |
| 8 | EAP, ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆ ಬಿಲ್ಲುಗಳು ಹಾಗೂ ಎಲ್ಲಾ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು. | 29-03-2014 |

ಬಿ) ಆಡಳಿತ ಇಲಾಖೆಗಳಿಗೆ ಸೂಚನೆಗಳು

1. ಇಲಾಖಾಧಿಕಾರಿಗಳು ಹಾಗೂ ಸಚಿವಾಲಯದ ಆಡಳಿತ ಇಲಾಖೆಗಳು : ಅನುದಾನದ ಪುನರ್ವಿನಿಯೋಗದ (Re-appropriation) ಕಾರ್ಯವನ್ನು ದಿನಾಂಕ: 10-03-2014ರೊಳಗೆ ಮುಕ್ತಾಯಗೊಳಿಸಬೇಕು. ಈ ಸಂಬಂಧ ಅಪ್‌ಲೋಡಿಂಗ್ ಕಾರ್ಯವನ್ನು ದಿನಾಂಕ: 20-03-2014 ರೊಳಗೆ ಮುಕ್ತಾಯಗೊಳಿಸಬೇಕು.

2. ದಿನಾಂಕ: 29-03-2014ರ ಅಪರಾಹ್ನ 12.00 ಘಂಟೆಯ ನಂತರ ಯಾವುದೇ ಬಿಲ್ಲುಗಳನ್ನು ಖಜಾನೆಗಳಿಗೆ ಸಲ್ಲಿಸುವುದನ್ನು ನಿರ್ಬಂಧಿಸಲಾಗಿದೆ.

3. ಇಲಾಖಾ ಮುಖ್ಯಸ್ಥರು ಮತ್ತು ಅವರುಗಳ ಹಣ ಪಡೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಈ ಆದೇಶದಲ್ಲಿ ತಿಳಿಸಿರುವ ವೇಳಾ ಪಟ್ಟಿಯಂತೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಆರ್ಥಿಕ ಮಿತವ್ಯಯ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

4. ಸರ್ಕಾರದ ಆದೇಶ ಸಂಖ್ಯೆ ಆಇ 2 ಟಿಎಫ್‌ಸಿ 2004, ದಿನಾಂಕ: 09-09-2004ರಲ್ಲಿ ತಿಳಿಸಿರುವ ಸೂಚನೆಗಳನ್ನು ಸಹ ಗಮನದಲ್ಲಿಟ್ಟುಕೊಂಡು ಮೇಲೆ ಹೇಳಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಆಯವ್ಯಯದಲ್ಲಿ ನಿಗದಿ ಪಡಿಸಿರುವ ಮೊತ್ತವನ್ನು ದಿನಾಂಕ 29-03-2014ರೊಳಗೆ ವೆಚ್ಚ ಮಾಡತಕ್ಕದ್ದು.

ಸಿ) **ಖಜಾನೆಗಳಿಗೆ ಸೂಚನೆಗಳು**

1. ಎಲ್ಲಾ ಖಜಾನೆಗಳಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸಲು ಅನುಕೂಲವಾಗುವಂತೆ ದಿನಾಂಕ: **01-04-2014ನ್ನು** ವ್ಯವಹಾರ ರಹಿತ ದಿನವನ್ನಾಗಿ ಘೋಷಿಸಲಾಗಿದೆ.

2. ಖಜಾನೆಗಳು ಮಾರ್ಚ್ 2013ರ ಲೆಕ್ಕಗಳನ್ನು 29ನೇ ಮಾರ್ಚ್ 2014ರ ನಂತರವೂ ತೆರೆದಿರಕೂಡದೆಂದು ಸೂಚಿಸಲಾಗಿದೆ.

3. ಸರ್ಕಾರಕ್ಕೆ 2013-14ರ ತಾತ್ಕಾಲಿಕ ಲೆಕ್ಕಗಳು ಮೇ 2014ರ 10ನೇ ತಾರೀಖಿನ ಒಳಗೆ ದೊರೆಯಲು ಅನುಕೂಲವಾಗುವಂತೆ ಖಜಾನೆಗಳು ಮಾರ್ಚ್ 2014ರ ಲೆಕ್ಕಗಳನ್ನು ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕರವರಿಗೆ ಕಳುಹಿಸಲು ವ್ಯವಸ್ಥೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಅರವಿಂದ ಶ್ರೀವಾಸ್ತವ)
ಸರ್ಕಾರದ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ)

**ಇವರಿಗೆ :**

1) ಮಹಾಲೇಖಪಾಲರು (ತನಿಖೆ-1)/(ತನಿಖೆ-2)/(ಎ&ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
3) ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
4) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
7) ಎಲ್ಲಾ ಇಲಾಖಾ ಮುಖ್ಯಸ್ಥರು.
8) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.
10) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-9
11) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
12) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು /ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
13) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14) ವಾರದ ಗೆಜೆಟ್ ಪತ್ರ.
15) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ

* * * * *

**ಸರ್ಕಾರಿ ಆದೇಶ ಸಂಖ್ಯೆ : ಆಇ 16 ಬಿಪಿಇ 2013, ಬೆಂಗಳೂರು, ದಿನಾಂಕ : 19-03-2014.**

ಸರ್ಕಾರದ ಆದೇಶ ಸಂಖ್ಯೆ: ಆಇ 16 ಬಿಪಿಇ 2013, ದಿನಾಂಕ:13-12-2013ರಲ್ಲಿ ಬಿಲ್ಲುಗಳನ್ನು ಖಜಾನೆಗಳಿಗೆ ಸಲ್ಲಿಸಲು ನಿಗದಿಗೊಳಿಸಿದ್ದ ದಿನಾಂಕಗಳನ್ನು ಭಾಗಶಃ ಮಾರ್ಪಡಿಸಿ ಈ ಕೆಳಗಿನಂತೆ ನಿಗದಿಗೊಳಿಸಲಾಗಿದೆ:-

| | ವಿವರಗಳು | | ಮಾರ್ಪಡಿಸಿ ನಿಗದಿಗೊಳಿಸಿದ ದಿನಾಂಕ |
|---|---|---|---|
| 1. | ಸಾದಿಲ್ವಾರು ವೆಚ್ಚದ ಬಿಲ್ಲುಗಳು | - | 21-03-2014. |
| 2. | ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳು | - | 21-03-2014. |
| 3. | ಅನುದಾನದ ಪುನರ್ವಿನಿಯೋಗದ (Re-appropriation) ಬಿಲ್ಲುಗಳು | - | 21-03-2014. |
| 4 | ಯೋಜನಾ(Plan schemes)/ಯೋಜನೇತರ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಬಿಲ್ಲುಗಳು | - | 21-03-2014. |

ಮೇಲ್ಕಂಡ ಬಿಲ್ಲುಗಳನ್ನು ಹೊರತುಪಡಿಸಿ ಉಳಿದ ಬಿಲ್ಲುಗಳನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ಆಇ 16 ಬಿಪಿಇ 2013, ದಿನಾಂಕ:13-12-2013 ರಲ್ಲಿ ನಿಗದಿಗೊಳಿಸಲಾಗಿದ್ದ ಕಾಲಮಿತಿಯು ಮುಂದುವರೆಯುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಣ್‌ದೀಪ್.ಡಿ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ)

ಇವರಿಗೆ :

1) ಮಹಾಲೇಖಪಾಲರು (ತನಿಖೆ-1)/(ತನಿಖೆ-2)/(ಎ&ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
3) ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
4) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
7) ಎಲ್ಲಾ ಇಲಾಖಾ ಮುಖ್ಯಸ್ಥರು.
8) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.
10) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ಮಂಡಳಿ, ಕೆ.ಜಿ. ರಸ್ತೆ, ಬೆಂಗಳೂರು.
11) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
12) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು /ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
13) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು, ಬೆಂಗಳೂರು.
15) ವಾರದ ಗೆಜೆಟ್ ಪತ್ರ, ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.